ಶ್ರೀ ಬಿ. ಜಿ. ಬಣಕಾರ್.—ಈಗ ಸರ್ಕಾರದವರು ಪ್ರಾಥಮಿಕ ಶಿಕ್ಷಣದ ಸಲುವಾಗಿ ಸುಮಾರು ೬೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಅದರ ಜೊತೆಗೆ, ಪ್ರತಿ ಶಾಲೆಗೂ ಪುಕ್ಕಟೆಯಾಗಿ ದಿನಪತ್ರಿಕೆ ಮತ್ತು ವಾರಪತ್ರಿಕೆಗಳನ್ನು ಆಯಾ ಶಾಲೆಯ ಮುಖ್ಯೋಪಾಧ್ಯಾಯರಿಗಾಗಲೀ ಅಥವಾ ಸಲಹಾ ಸಮಿತಿಯ ಅಧ್ಯಕ್ಷರಿಗಾಗಲೀ ಕಡ್ಡಾಯವಾಗಿ ಕಳುಹಿಸಿ, ಅಲ್ಲಿನ ವಿದ್ಯಾರ್ಥಿಗಳು ಮತ್ತು ಜನರು ಅವುಗಳನ್ನು ಓದಲು ಅನುಕೂಲವಾಗುವಂತೆ ಒಂದು ಆದೇಶವನ್ನು ಸರ್ಕಾರದವರು ಕೊಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ,—ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ ; ಇದು ಪರಿಶೀಲನೆಗೆ ಅರ್ಹವಾದ ಸಲಹೆ.

Employment to unemployed in Tumkur District

230. SRI T. M. MANJUNATH (Tiptur).—(Will the Minister for Excise and Labour) be pleased to state.—

(a) the total number of unemployed persons who have registered their names in Employment Exchange in Tumkur District ;

(b) the action taken to provide employment to these persons ;

(c) the total number of persons provided with employment in 1975-76 ;

(d) the total number of unemployed Scheduled Castes and Scheduled Tribes people who have registered their names in Employment Exchange in Tumkur District (Talukwise details may be furnished) ?

SRI S. M. YAHYA (Minister for Excise and Labour).—

(a) 11,180.

(b) Registrants are sponsored against notified vacancies.

(c) 339 during the calendar year 1975.

(d) Scheduled Castes.—1,693.

Scheduled Tribes.—Nil

Taluk-wise details of these persons are not maintained.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಮಂತ್ರಿಗಳು ನನ್ನ (ಈ) ಪ್ರಶ್ನೆಗೆ ಉತ್ತರವಾಗಿ, "ಅನುಸೂಚಿತ ಆದಿಮ ಜಾತಿಯವರು ಏನೂ ಇಲ್ಲ" ಎಂದು ತಿಳಿಸಿದ್ದಾರೆ. ಬಹುಶಃ ಅದು ತಪ್ಪು ಎಂದು ನನಗೆ ಕಾಣುತ್ತದೆ. ಆದುದರಿಂದ, ಮಾನ್ಯ ಮಂತ್ರಿಗಳು ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡುತ್ತಾರೆಯೇ ?

†ಶ್ರೀ ಎಸ್. ಎಂ. ಯಾಹ್ಯಾ.—ಇದರಲ್ಲಿ ತಪ್ಪೇನೂ ಇಲ್ಲ. ಹಿಂದೆ, ಇಬ್ಬರು ಅನುಸೂಚಿತ ಆದಿಮ ಜಾತಿಯವರು ರಿಜಿಸ್ಟರ್ ಮಾಡಿಸಿದ್ದರು. ಅವರಿಗೆ ಕೆಲಸ ಸಿಕ್ಕರಬೇಕು ಎಂದು ಕಾಣುತ್ತದೆ ; ಅವರು ಈಗ ರೆನ್ಯೂ ಮಾಡಿಸುತ್ತಾ ಇಲ್ಲ. ಅಲ್ಲದೆ, ಡಿಸೆಂಬರ್ ೧೯೭೫ ರವರೆಗಿನ ನಮ್ಮ ರಿಜಿಸ್ಟರ್‌ನಲ್ಲಿ ಅನುಸೂಚಿತ ಆದಿಮ ಜಾತಿಯವರು ಯಾರೂ ಇಲ್ಲ. ಮೊದಲು ಇಬ್ಬರು ಇದ್ದರು.

ಶ್ರೀ ಟಿ. ಎಂ. ಮಂಜುನಾಥ್.—ಬೆಂಗಳೂರು ನಗರದಲ್ಲಿ ಅನೇಕ ಕಾರ್ಖಾನೆಗಳು ಇವೆ. ಆ ಕಾರ್ಖಾನೆಗಳವರು ಪ್ರತಿ ವರ್ಷವೂ ನೌಕರರನ್ನು ನೌಕರಿಗೆ ತೆಗೆದುಕೊಳ್ಳುತ್ತಿದ್ದಾರೆ. ಹೀಗೆ ತೆಗೆದುಕೊಳ್ಳುವಾಗ, ಜಿಲ್ಲಾವಾರು ಆಧಾರದ ಮೇಲೆ ನೌಕರಿ ಕೊಡುವುದರ ಬಗ್ಗೆ ಸರ್ಕಾರದವರು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಸ್. ಎಂ. ಯಾಹ್ಯಾ.—ನೌಕರಿ ಕೊಡುವ ವಿಚಾರದಲ್ಲಿ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಆಧಾರಗಳೇನೂ ಇಲ್ಲ. ಯಾರು ಬೇಕಾದರೂ ಅರ್ಜಿ ಹಾಕಿ ನೌಕರಿಗೆ ಸೇರಬಹುದಾಗಿದೆ. Employment Exchange has a limited purpose. If you want certain names for a particular job they can only forward the names of those entrants. As far as Tumkur is concerned, we have started this year – ie., in August 1975 one I.T.C. Centre so that the trained boys could be used in Bangalore and other industrial centres. This I.T.C. will help the people of Tumkur to a great extent.

ಶ್ರೀ ಟಿ. ಎಂ. ಮಂಜುನಾಥ್.—ನಮ್ಮ ತುಮಕೂರು ಜಿಲ್ಲೆಯಲ್ಲಿ ಒಂದು ಉದ್ಯೋಗ ವಿನಿಮಯ ಕೇಂದ್ರವಿದೆ. ಅಲ್ಲದೆ, ತುಮಕೂರಿನಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಇತರ ಬ್ಯಾಂಕುಗಳವರು ಆಗಾಗ್ಗೆ ನೌಕರಿಗೆ ಕೆಲವರನ್ನು ತೆಗೆದುಕೊಳ್ಳುತ್ತಾ ಇರುತ್ತಾರೆ. ಇದರ ಬಗ್ಗೆ ನಾವು ಉದ್ಯೋಗ ವಿನಿಮಯ ಕೇಂದ್ರದಲ್ಲಿ ವಿಚಾರಿಸಿದರೆ, ನಾವು ಸೀರಿಯಲ್ ಆಗಿ ಕಳುಹಿಸುತ್ತೇವೆ ಎಂದು ಅವಮಾನ ಮಾಡಿದ ಹಾಗೆ ಹೇಳುತ್ತಾರೆ. ಆದರೆ, ಹಣ ಕೊಟ್ಟವರಿಗೆ ಅದ್ಯಾವುದನ್ನೂ ನೋಡದೆ ಕಳುಹಿಸುತ್ತಾರೆ. ಆದುದರಿಂದ, ನ್ಯಾಯವಾಗಿ, ರಿಜಿಸ್ಟರ್ ಮಾಡಿಸಿ, ರಿನ್ಯೂ ಆಗುತ್ತಿರುವವರಿಗೆ ಮಾತ್ರ ಇಂಟರ್‌ವ್ಯೂಗೆ ಕಳುಹಿಸಿಕೊಡುವ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡುವರೆ ?

ಶ್ರೀ ಎಸ್. ಎಂ. ಯಾಹ್ಯಾ.—ಸೀರಿಯಲ್ ಪ್ರಕಾರವೇ ಕೊಡಬೇಕೆಂದು ಸರ್ಕಾರದವರು ಆಜ್ಞೆ ಹೊರಡಿಸಿದ್ದಾರೆ. ಆದುದರಿಂದ, ಇಲ್ಲಿ ಪ್ರಭಾವ ಬೀರುವುದರಿಂದ, ಬೇರೆಯವರಿಗೆ ತೊಂದರೆಯಾಗುತ್ತದೆ. ಮಂತ್ರಿಯಾಗಲೀ, ಸದಸ್ಯರಾಗಲೀ, ಯಾರೇ ಆಗಲೀ—ಎಲ್ಲರೂ ಸೀರಿಯಲ್ ಪ್ರಕಾರವೇ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು, ಉದ್ಯೋಗ ವಿನಿಮಯ ಕೇಂದ್ರದ ಕೆಲಸ "ವಿನಿಮಯ" ಮಾಡುವುದು ಎಂದು ಹೇಳಿದ್ದಾರೆ. ಬೆಂಗಳೂರು ಜಿಲ್ಲೆಯವರು ರಿಜಿಸ್ಟರ್ ಮಾಡಿಸಿದ್ದರೂ ಕೂಡ, ಹೆಚ್ಚು ಹೆಚ್ಚು ಬೆಂಗಳೂರು ನಗರದವರಿಗೆ ಮಾತ್ರ ವಿನಿಮಯಕ್ಕೆ ಅವಕಾಶವಾಗುತ್ತಿದೆ ಎಂಬ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೇನಾದರೂ ಬಂದಿದ್ದರೆ, ಅದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಸ್. ಎಂ. ಯಾಹ್ಯಾ.—ಬೆಂಗಳೂರು ನಗರದ ಜನಸಂಖ್ಯೆ ಹೆಚ್ಚು ಇದೆ. ಆದುದರಿಂದ, ಇಲ್ಲಿ ನಾಲ್ಕು ಉದ್ಯೋಗ ವಿನಿಮಯ ಕೇಂದ್ರಗಳಿವೆ. ತುಮಕೂರಿನಲ್ಲಿ ಒಂದು ಇದೆ. ಹೀಗೆ, ಉದ್ಯೋಗ ವಿನಿಮಯ ಕೇಂದ್ರಗಳು ಸೀಮಿತ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿವೆ. ಇಂಥಾ ಕಡೆಗೆ ಕಳುಹಿಸಬಾರದು ; ಇಂಥಾ ಕಡೆ ಕಳುಹಿಸಬೇಕು ಎಂದೇನೂ ಇಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ತುಮಕೂರು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೊಂದಾಯಿಸಿದವರ ಹೆಸರು, ಕಳೆದ ೨-೩ ವರ್ಷಗಳಿಂದ ಎಷ್ಟು ಜನರಿಗೆ ಕೆಲಸ ಸಿಕ್ಕಿದೆ – ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುವರೆ ?

ಶ್ರೀ ಎಸ್. ಎಂ. ಯಾಹ್ಯಾ.—ನಿರ್ದಿಷ್ಟವಾಗಿ ಕ್ಯಾಲೆಂಡರ್ ವರ್ಷದಲ್ಲಿ ಸುಮಾರು ೩೫೯ ಜನರಿಗೆ ಕೆಲಸ ಸಿಕ್ಕಿದೆ. ಇದರಲ್ಲಿ ೧೨೦ ಜನ ಹರಿಜನರು.

1-30 P. M.

ಶ್ರೀ ಬಿ. ಬೈರಪ್ಪಾಜಿ.—ಇತ್ತೀಚೆಗೆ ಸರ್ಕಾರವು ಪ್ರತಿಯೊಂದು ಇಲಾಖೆಯಲ್ಲೂ ಸಂಸ್ಥಾನದ ಮಟ್ಟದಲ್ಲಿ ಸಮಿತಿಗಳ ಮೂಲಕ ಕೆಲಸಗಳನ್ನು ಕೊಡುವ ಏರ್ಪಾಡು ಮಾಡಿದೆ. ಜಿಲ್ಲಾ ಮಟ್ಟದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಿಂದ ಹೆಚ್ಚಿಗೆ ಕೆಲಸವಾಗುತ್ತಿಲ್ಲ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿರುವುದು ಗೊತ್ತಿದೆಯೇ ? ಉದ್ಯೋಗ ವಿನಿಮಯ ಕೇಂದ್ರಗಳನ್ನು ಮುಚ್ಚುವಂತೆ ವ್ಯವಸ್ಥೆ ಮಾಡಲಾಗಿದೆಯೇ ?

ಶ್ರೀ ಎಸ್. ಎಂ. ಯಾಹ್ಯಾ.—ಇದರಿಂದ ಯಾರಿಗೂ ನಷ್ಟ ಖಂಡಿತವಾಗುವುದಿಲ್ಲ. ಪಬ್ಲಿಕ್ ಸರ್ವೀಸ್ ಕಮೀಷನ್ ಆಗಲೀ, ರಿಕ್ರೂಟ್‌ಮೆಂಟ್ಸ್ ಕಮಿಟಿಗಳಾಗಲೀ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳನ್ನು ಕೇಳಿ ರಿಕ್ರೂಟ್‌ಮೆಂಟ್ ಮಾಡತಕ್ಕಂಥ ಅಧಿಕಾರವಿಲ್ಲ. ಒಂದು ವೇಳೆ ಅವರು ಕೇಳಿದರೆ, ನಾವು ಕೊಡುತ್ತೇವೆ. ಪಬ್ಲಿಕ್ ಸೆಕ್ಟಾರ್ ಇಂಡಿಸ್ಪೆನ್ಸಿಬಲ್ ಆಗಲೀ, ಯಾವುದೇ ಒಂದು ಇಂಡಿಸ್ಪೆನ್ಸಿಬಲ್ ಆಗಲೀ, ಅವರು ಉದ್ಯೋಗ ಕೊಡಬೇಕಾದರೆ, ನಮ್ಮ ಉದ್ಯೋಗ ವಿನಿಮಯ ಕೇಂದ್ರಗಳಿಗೆ ಬರೆದು ತರಿಸಿಕೊಳ್ಳುತ್ತಾರೆ.

ಎಂ. ಬಿ. ರಾಮಸ್ವಾಮಿ.—ಬಹುಭಾಗದ ಜನ ತಮಿಳುನಾಡು ಮತ್ತು ಕೇರಳದವರು ನಮ್ಮ ಕರ್ನಾಟಕ ರಾಜ್ಯದಲ್ಲಿ ರಿಜಿಸ್ಟರ್ ಮಾಡಿಸುತ್ತಿದ್ದಾರೆ, ಇದರಿಂದ ನಮ್ಮ ರಾಜ್ಯದ ಮಕ್ಕಳಿಗೆ ತೊಂದರೆಯಾಗಿರುವುದು ಸರ್ಕಾರಕ್ಕೆ ಗೊತ್ತಿದೆಯೇ ? ಇನ್ನು ಮುಂದಾದರೂ ಕರ್ನಾಟಕದವರಿಗೆ ಹೆಚ್ಚಿಗೆ ಅವಕಾಶ ಕಲ್ಪಿಸಿ ಕೊಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಈಗ ಬೇರೆ ರಾಜ್ಯದಿಂದ ಬಂದು ಇಲ್ಲಿ ರಿಜಿಸ್ಟರ್ ಮಾಡಿಸುವುದಕ್ಕೆ ತುಂಬಾ ಕಷ್ಟವಿದೆ. ರಿಜಿಸ್ಟರ್ ಮಾಡಿಸಬೇಕಾದರೆ, ಕೆಲವು ನಿಯಮಗಳನ್ನು ಹಾಕಿರುತ್ತೇವೆ. ತಹಶೀಲ್ದಾರ್‌ರವರಿಂದ 6 ತಿಂಗಳು ಈ ರಾಜ್ಯದಲ್ಲಿ ವಾಸವಿರುವ ಪ್ರಮಾಣ ಪತ್ರ ಇರಬೇಕು ; ಈಗ ಇಂತವರಿಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿಕೊಡಲಾಗುತ್ತೆ.

ಕಬ್ಬನಹಳ್ಳಿ ಕ್ರಾಸಿನಿಂದ ಯಳನಾಡಗೆ ಅದಿರು ಸಾಗಿಸುವ ರಸ್ತೆ

268. ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನ ಹಳ್ಳಿ).—ಲೋಕೋಪಯೋಗಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಚಿಕ್ಕನಾಯಕನ ಹಳ್ಳಿಯಲ್ಲಿ ಕಬ್ಬನ ಹಳ್ಳಿ ಕ್ರಾಸಿನಿಂದ ಯಳನಾಡುವರೆಗೆ ಓರ್ಕ್ಯಾರಿಯಿಂಗ್ ರೋಡು ಬಹಳ ಅವ್ಯವಸ್ಥೆಯಲ್ಲಿದ್ದು ಅದನ್ನು ತೀವ್ರ ರಿಪೇರಿ ಮಾಡಿಸಿ ಆಸ್ಫಾರ್ಟ್ ಹಾಕಿ ಕೊಡಲು ಸರಕಾರ ಉದ್ದೇಶಿಸಿದೆಯೇ :

(ಆ) ಹಾಗಾದರೆ, ಯಾವಾಗ ?

ಶ್ರೀ ಎಸ್. ಟಿ. ನಾಗರಾಳ್.—(ಸಣ್ಣ ನೀರಾವರಿ ಶಾಖೆಯ ರಾಜ್ಯ ಮಂತ್ರಿಗಳು)

ಶ್ರೀ ಎಚ್. ಎಂ. ಚನ್ನಬಸಪ್ಪ ರವರ ಪರವಾಗಿ ಲೋಕೋಪಯೋಗಿ ಮಂತ್ರಿಗಳು

(ಅ) ಇಲ್ಲ. ಅಲ್ಲಲ್ಲಿ ಕೆಲವು ಗುಂಡಿಗಳು ಮಾತ್ರ ಇವೆ.

(ಆ) ಪ್ರಸಕ್ತ ಸಾಲಿನಲ್ಲಿ ಗುಂಡಿಗಳನ್ನು ಮುಚ್ಚಲು ಕ್ರಮ ಕೈಕೊಳ್ಳಲಾಗಿದೆ.

ಶ್ರೀ ಎನ್. ಬಸವಯ್ಯ.—ಕಬ್ಬನ ಹಳ್ಳಿ ಮತ್ತು ಯಳನಾಡು ರಸ್ತೆಯಲ್ಲಿರತಕ್ಕಂಥ ಗುಂಡಿಗಳು ಎಷ್ಟು ವರ್ಷದಿಂದ ಇವೆ ?

† ಶ್ರೀ ಎಸ್. ಬಿ. ನಾಗರಾಳ್.—ಎಷ್ಟು ವರ್ಷದಿಂದ ಇವೆ ಎನ್ನುವುದು ಗೊತ್ತಿಲ್ಲ ? ರಸ್ತೆ ಕೆಟ್ಟಿದೆ ಎನ್ನುವುದು ಗೊತ್ತು.

ಶ್ರೀ ಎನ್. ಬಸವಯ್ಯ.—ಸ್ವಾಮಿ, ಎಷ್ಟು ಗುಂಡಿಗಳು ಇವೆ ಎಂದು ಸಂಖ್ಯೆಗಳನ್ನಾದರೂ ಹೇಳುತ್ತೀರಾ ?